

ಮೂಡಿಸಲಾಗುತ್ತದೆ. ಒಂದು ಹಂತದ ಅಚ್ಚಿನ ಕಾರ್ಯ ಮುಗಿದ ಮೇಲೆ ಇನ್ನೊಂದು ಬಣ್ಣದ ಅಚ್ಚಿನಿಂದ ಮತ್ತೆ ಪ್ರಿಂಟಿಂಗ್ ಕೆಲಸ ಮುಂದುವರಿಯುತ್ತದೆ. ಹೀಗೆ ಪ್ರಿಂಟಿಂಗ್ ಕೆಲಸ ಪೂರ್ಣವಾಗುತ್ತಿದ್ದಂತೆಯೇ ಸೀರೆಯನ್ನು ಮತ್ತೆ ಒಣಗಿಸಲಾಗುತ್ತದೆ. ಬಿಸಿಲಿನಲ್ಲಿ ಚೆನ್ನಾಗಿ ಒಣಗಿದ್ರೆ ಅದ್ರ ಬಣ್ಣ ಮಾಸೋ ಮಾತೇ ಇಲ್ಲ. ಪ್ರತಿದಿನ ಉಟ್ಟರೂ ಈ ಸೀರೆ ಮತ್ತೆ ಮತ್ತೆ ಹೊಸದರಂತೆಯೇ ಕಾಣುತ್ತದೆ ಅನ್ನೋದು ಇದರ ಭಿನ್ನತೆ. ಹೀಗೆ ಒಣಗಿದ ಸೀರೆಯನ್ನು ಕೊನೆಯದಾಗಿ ಕುದಿಯುವ ನೀರಿಗೆ ಅಲಿಜರ್ ಬಣ್ಣವನ್ನು ಹಾಕಿ ಅದರಲ್ಲಿ ಚೆನ್ನಾಗಿ ಅದ್ದಿ ತೆಗೆಯಲಾಗುತ್ತದೆ. ಹೀಗೆ ಅದ್ದಿದ ಸೀರೆಯನ್ನು ಮತ್ತೆ ಬಿಸಿಲಿನಲ್ಲಿ ಒಣಗಿಸಿದರೆ ಫೈನಲ್ ಸೀರೆ ಸಿದ್ಧವಾಗಿರುತ್ತದೆ.

## ಎಲ್ಲವೂ ಆರ್ಗ್ಯಾನಿಕ್

ಅಜ್ರೆಕ್ ಸೀರೆಗಳಲ್ಲಿ ನಾವು ಬೇಕಾಬಿಟ್ಟಿ ಬಣ್ಣಗಳನ್ನು ನೋಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಕಾರಣ ಈ ಪ್ರಿಂಟಿಂಗ್‌ನಲ್ಲಿ ಬಳಕೆಯಾಗುವ ಬಣ್ಣಗಳೆಲ್ಲವೂ ನೈಸರ್ಗಿಕ. ದಾಳಿಂಬೆ, ಸುಣ್ಣ, ಹಳದಿ, ಕಬ್ಬಿಣ ಹೀಗೆ ಬೇರೆ ಬೇರೆ ನೈಸರ್ಗಿಕ ವಸ್ತುಗಳನ್ನು ಬಳಸಿ ಇದರ ಬಣ್ಣವನ್ನು ತಯಾರಿಸಲಾಗುತ್ತದೆ. ಅಲ್ಲದೆ ಇದರಲ್ಲಿ ಬಳಸುವ ಅಚ್ಚು ಕೂಡ ವಿಶೇಷ. ಇದನ್ನು ಗಾಂಧಿನಗರದಲ್ಲಿ ಮಾತ್ರವೇ ತಯಾರಿಸಲಾಗುತ್ತದೆ.

## ಕೃಷಿಕರಿಗಾಗಿ ತಯಾರಾದ ಸೀರೆ

ಇಂದು ಫ್ಯಾಷನ್ ಲೋಕದಲ್ಲಿ ತನ್ನದೇ ಛಾಪು ಮೂಡಿಸಿರುವ ಅಜ್ರೆಕ್ ಸೀರೆಗಳು, ಉಡುಪುಗಳು ಸಾವಿರಾರು ವರ್ಷಗಳ ಹಿಂದೆ ಕೃಷಿಕ, ದನಗಾಹಿ ಮಹಿಳೆಯರಿಗೆಂದೇ ವಿಶೇಷವಾಗಿ ತಯಾರಿಸಿದ್ದು. ಸಾಮಾನ್ಯವಾಗಿ ಕೃಷಿಕರು ಮುಂಜಾನೆ, ಅಂದರೆ ಸರಿಸುಮಾರು ನಾಲ್ಕು ಐದು ಗಂಟೆಗಳ ಒಳಗೆಲ್ಲ ಮನೆ ಬಿಡುತ್ತಿದ್ದರು. ಆಗಿನ್ನೂ ಬೆಳಕು ಸರಿಯಾಗಿ ಹರಿದಿರುತ್ತಿರಲಿಲ್ಲ. ಅವರಿಗೆ ಸೀರೆ ಉಡಲು ಅನುಕೂಲವಾಗಲಿ ಅನ್ನುವ ಕಾರಣಕ್ಕಾಗಿಯೇ ಈ ಸೀರೆಯ ಎರಡೂ ಬದಿಯಲ್ಲಿ ಒಂದೇ ರೀತಿಯ ಪ್ರಿಂಟಿಂಗ್ ಇರುತ್ತದೆ. ಹೀಗಾಗಿ ಈ ಸೀರೆಯನ್ನು ಹಿಂದೆ ಮುಂದೆ ಎರಡೂ ಬದಿಯಿಂದಲೂ ಉಡಬಹುದು.

ಇಷ್ಟು ಮಾತ್ರವಲ್ಲ ಈ ಸೀರೆಯ ಮೂಲ ಗುಜರಾತ್‌ನ ಕಛ್. ಅಂದರೆ ಮರುಭೂಮಿ. ಇಲ್ಲಿನ ತಾಪಮಾನಕ್ಕೆ ಸರಿಹೊಂದುವಂತೆ ಇದನ್ನು ತಯಾರಿಸಲಾಗಿದೆ. ಈ ಉಡುಪಿನ ವಿಶೇಷವೆಂದರೆ ಇದು ಬಿಸಿಲಿನಲ್ಲಿ ತಣ್ಣಗಿರುತ್ತದೆ, ಚಳಿಯಲ್ಲಿ ಬೆಚ್ಚಗಿರುತ್ತದೆ.

## ಇಂದಿರಾ ಗಾಂಧಿಗೂ ಪ್ರಿಯ

ಸಾಮಾನ್ಯವಾಗಿ ರಾಜಕೀಯದಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಮಿನುಗೋ ಸೀರೆಗಳಿಗಿಂತ ಅವರಿಗೆ ಪ್ರೌಢಿಮೆ ನೀಡುವ ಸೀರೆಗಳಿಗೆ ಹೆಚ್ಚು ಒತ್ತು ನೀಡುತ್ತಾರೆ. ಮಮತಾ ಬ್ಯಾನರ್ಜಿಗೆ ಉಡುಪಿಯ ಕೈಮಗ್ಗದ ಸೀರೆಗಳೆಂದರೆ ಪ್ರೀತಿ ಇದ್ದಂತೆ, ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರಿಗೆ ಅಜ್ರೆಕ್‌ನ ಸೀರೆಗಳೆಂದರೆ ತುಂಬಾ ಪ್ರೀತಿ ಇತ್ತು. ಹೀಗಾಗಿಯೇ ಅವರ ಬಳಿ ಬೇರೆ ಬೇರೆ ಪ್ರಿಂಟಿಂಗ್‌ನ ಅಜ್ರೆಕ್ ಸೀರೆಗಳ ಸಂಗ್ರಹವಿತ್ತು. ■

## ಸೀರೆ ಶೈಲಿ

ವೈವಿಧ್ಯಮಯ ಸೀರೆಗಳು ಇರುವಂತೆ ಸೀರೆ ಉಡುವುದರಲ್ಲಿ ಸಾಕಷ್ಟು ವೈವಿಧ್ಯವಿದೆ. ಆಯಾ ಪ್ರಾದೇಶಿಕತೆಗೆ ತಕ್ಕಂತೆ ಉಡುವ ಶೈಲಿ ಕೂಡ ಬದಲಾವಣೆ ಆಗುತ್ತಿದೆ. ಸೀರೆ ಉಡುವ ಕಲೆ ಈಗ ಫ್ಯಾಷನ್ ಆಗುತ್ತಲಿದೆ. ಶೈಲಿಗಳು ಸಾಂಪ್ರದಾಯಿಕ ದಿರಿಸು ಸೀರೆಯನ್ನು ಔಟ್ ಆಫ್ ಫ್ಯಾಷನ್ ಆಗದಂತೆ ಮಾಡುತ್ತಿವೆ.

ಮೊದಲೆಲ್ಲಾ ಸೀರೆ ಉಡುವವರ ಮೇಲೆ ಅವರ ಪ್ರಾದೇಶಿಕತೆಯನ್ನು ಗುರುತಿಸಬಹುದಾಗಿತ್ತು. ಆದರೆ ಈಗೀಗ ಅವೆಲ್ಲವನ್ನೂ ಮೀರಿ ನಮ್ಮಲ್ಲಿ ವೈವಿಧ್ಯ ಕಂಡುಬರುತ್ತಿದೆ. ಬಂಗಾಳಿ ಸೀರೆ, ಮಹಾರಾಷ್ಟ್ರ, ದಕ್ಷಿಣ ಭಾರತ, ಕರ್ನಾಟಕ, ಕೇರಳ ಹೀಗೆ ವೈವಿಧ್ಯಮಯ ಸೀರೆಗಳು ಪ್ರಾದೇಶಿಕತೆಯನ್ನು ಮೀರಿಸಿವೆ.

ಫ್ಯೂಷನ್ ಸೀರೆಯ ಪ್ರಯೋಗಗಳು ಮತ್ತೊಂದು ಕಡೆಯಿಂದ ಸಾಂಪ್ರದಾಯಿಕ ದಿರಿಸು ಸೀರೆಯನ್ನು ಫ್ಯಾಷನ್ ಆಗಿ ಮೆರೆಸುತ್ತವೆ. ಪಾಶ್ಚಾತ್ಯ ಶೈಲಿಯ ಸ್ಪರ್ಶ ನೀಡಿ ಮೆರುಗು ಕಾಣುವಂತೆ ಮಾಡುವ ಪ್ರಯೋಗಗಳು ಇತ್ತೀಚೆಗೆ ಹೆಚ್ಚಾಗಿ ಕಾಣಿಸುತ್ತಿದೆ. ಕಚ್ಚೆ ಸೀರೆ, ಧೋತಿ ಅಥವಾ ಪ್ಯಾಂಟ್ ಮೇಲೆ ಧರಿಸುವ ಸೀರೆ, ರವಿಕೆ ತೊಡುವ ಸೀರೆ ಹೀಗೆ ವೈವಿಧ್ಯಮಯವಾಗಿ ಕಂಡುಬರುತಿದ್ದು ಸೀರೆ ಎಂದರೆ ದೂರ ಸರಿಯುತ್ತಿದ್ದ ಯುವತಿಯರು ಇತ್ತೀಚೆಗೆ ಸೀರೆಯನ್ನು ಮೆಚ್ಚಲಾರಂಭಿಸಿದ್ದಾರೆ.

ತುಂಬ ಬೆಲೆಬಾಳುವ ಸೀರೆಯನ್ನು ಮತ್ತು ಅದನ್ನು ತೊಟ್ಟ ಮಹಿಳೆಯರ ಸೌಂದರ್ಯವನ್ನು ಕೂಡ ಹೆಚ್ಚಿಸುವ ಇನ್ನಷ್ಟು ವಿಧಾನಗಳು ಇವೆ. ಅದರಲ್ಲಿ ಹೆಚ್ಚು ಪ್ರಚಲಿತದಲ್ಲಿರುವುದು ಮತ್ಸ್ಯಕನ್ಯೆಯ ಹಾಗೆ ಕಾಣುವಂತೆ ಸೀರೆ ಉಡುವ ಮರ್ಮೇಡ್ ಸ್ಟೈಲ್ ಹಾಗೂ ಬಟರ್‌ಫ್ಲೈ ಸ್ಟೈಲ್. ಇವುಗಳನ್ನು ಹೊರತುಪಡಿಸಿದಂತೆ ಸಮಾರಂಭಕ್ಕೆ ತಕ್ಕಂತೆ ನಮ್ಮಲ್ಲಿ ಸೀರೆ ಉಡುವ ಶೈಲಿಯೂ ಕೂಡ ಬದಲಾವಣೆ ಮಾಡಿಕೊಳ್ಳುವ ಪರಿಪಾಟ ಎಲ್ಲರಲ್ಲೂ ಹುಟ್ಟಿಕೊಂಡಿದೆ.

ಮದುಮಗಳನ್ನು ಮಹಾರಾಣಿಯಂತೆ, ಯುವ ರಾಜಕುಮಾರಿಯಂತೆ ಕಾಣಿಸಬಲ್ಲ ವಿವಿಧ ರೀತಿಯಲ್ಲಿ ಸಿಂಗರಿಸಲಾಗುತ್ತದೆ. ಸಭೆ ಸಮಾರಂಭ ಇದ್ದರೂ ಕೂಡ ಅದಕ್ಕೆ ತಕ್ಕಂತೆ ಸೀರೆಯನ್ನು ಉಡುವ ಶೈಲಿ ಬದಲಾಗುತ್ತಾ ಹೋಗುತ್ತದೆ. ಸೀರೆ ಉಡಲು ಹಿಂದೆ ಮುಂದೆ ನೋಡುವವರಿಗೆ ಸುಲಭವಾಗಿ ಉಟ್ಟುಕೊಳ್ಳಲು ಅನುಕೂಲವಾಗುವಂತೆ ಬಂದಿರುವ ರೆಡಿಮೇಡ್ ಸೀರೆಗಳು ಕೂಡ ಸಾಕಷ್ಟು ವಿನ್ಯಾಸಗಳನ್ನು ಹೊಂದಿವೆ.

■ ಶಿವಲೀಲಾ ಸೊಪ್ಪಿಮಠ